ಅಸಲು ದಾವೆ ನಂಃ 94/2016 ಡಿ .ಡಬ್ಲ್ಯೂಃ1- ಶಾಂತಪ್ಪ ಅಕ್ಕಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 18-01-2024 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ ಶ್ರೀ B M SHILLIN ವಕೀಲರಿಂದಃ**

1. ವೀರಪ್ಪ ನನ್ನ ತಂದೆ. ಪ್ರಭು ಅಂದಾನಪ್ಪ ಆದಿ ಮತ್ತು ಶಾಮಸುಂದರ ಆದಿ ಇಬ್ಬರು ಖಾಸ ಅಣ್ಣತಮ್ಮಂದಿರು ಎಂದರೆ ನಿಜ. ದಾವಾ ಆಸ್ತಿ ವಿ.ಪಿ.ಸಿ. 59/B/2 and VPC 59/B/1 ಇಬ್ಬರು ಅಣ್ಣತಮ್ಮಂದಿರು ಪಾಲು ವಿಭಾಗ ಮಾಡಿಕೊಳ್ಳುವ ಪೂರ್ವದಲ್ಲಿ ಅದು ಒಂದೇ ಅಖಂಡ ಮನೆ ಎಂದರೆ ನಿಜ. ಆಗ ವಿ.ಪಿ.ಸಿ. 59/B ಎಂದ ಇತ್ತು ಎಂದರೆ ನಿಜ. ನಾನು 2018 ರಲ್ಲಿ ಗ್ರಾಮ ಪಂಚಾಯತಿ ಸದಸ್ಯನಾಗಿ ಆಯ್ಕೆಯಾಗಿದ್ದೆ ಎಂದರೆ ನಿಜ. ಒಮ್ಮೆ ಮಾತ್ರ ಆಯ್ಕೆಯಾಗಿದ್ದೇನೆ. ನಾನು 2016 ಗ್ರಾಮ ಪಂಚಾಯತಿ ಸದಸ್ಯನಾಗಿದ್ದೆ ಎಂದರೆ ಸರಿಯಲ್ಲ. ನಾವು ನಿಪಿ-4 ರ ಪ್ರಕಾರ ವಿ.ಪಿ.ಸಿ. 59/B/1 ನ್ನು ದಿನಾಂಕ 21/09/2015 ರಂದು ಶಾಮಸುಂದರ (3 ನೇ ಪ್ರತಿವಾದಿ)ಯ ಕಡೆಯಿಂದ ಖರೀದಿ ಮಾಡಿದ್ದೇವೆ ಎಂದರೆ ನಿಜ. ಸಾಕ್ಷಿ ಅವರ ಹೆಸರಿಗೆ ಖಾತೆ ಮತ್ತು ಇ ಸ್ವತ್ತು ಆಗಿತ್ತು ಅವರ ಪಾಲಿಗೆ ಬಂದಿತ್ತು ಎಂದು ಹೇಳುತ್ತಾರೆ. ದಾವಾ ಆಸ್ತಿ ಖರೀದಿ ಮಾಡುವ ಪೂರ್ವದಲ್ಲಿ ಸದರಿ ಆಸ್ತಿಗೆ ಸಂಬಂಧಪಟ್ಟಂತಹ 11E ನಕ್ಷೆ ಮಾಡಿಸಿರಲಿಲ್ಲ. ಸಾಕ್ಷಿ ಮುಂದುವರೆದ ಅವರು ಇಬ್ಬರು ಅಣ್ಣತಮ್ಮಂದಿರು ಅವರು ಮಾಡಿಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಖರೀದಿ ಮಾಡುವ ಸಮಯದಲ್ಲಿ ಪ್ರಭು ಅಂದಾನಪ್ಪ ಆದಿ ಖರೀದಿ ಪತ್ರಕ್ಕೆ ಸಮ್ಮತಿ ಸಹಿ ಹಾಕಿಲ್ಲ. ದಾವಾ ಆಸ್ತಿ ಖರೀದಿ ಮಾಡುವ ಪೂರ್ವದಲ್ಲಿ ಶಾಮಸುಂದರ ಆದಿ ಇವರಿಗೆ ಹೇಗೆ ಬಂತು ಎಂದು ನೋಡಲು ಪಂಚಾಯತಿಯ ಠರಾವನ್ನು ತೆಗೆಸಿ ನೋಡಿಲ್ಲ. ನಿಪಿ-3 ಜಕ್ಕಲಿ ಗ್ರಾಮದ ಪಂಚಾಯತಿಯ ಠರಾವು ಸಂಖ್ಯೆ 5 ನ್ನು ಈಗ ನೋಡುತ್ತಿದ್ದೇನೆ. ಅದನ್ನು ವಾದಿ ಪರ ವಕೀಲರು ಓದಿ ಹೇಳುತ್ತಾರೆ. ಅದರಲ್ಲಿ ಶಾಮ ಸುಂದರ ಇವರಿಗೆ ಪಶ್ಚಿಮ ದಿಕ್ಕಿಗೆ ಹಾಗೂ ಪ್ರಭು ಇವರಿಗೆ ಪೂರ್ವ ದಿಕ್ಕಿಗೆ ಬಂದಿರುವುದನ್ನು ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ನಾನು ಈಗ ನಿಪಿ-4 ನನ್ನ ಖರೀದಿ ಕಾಗದ ಪತ್ರವನ್ನು ನೋಡುತ್ತಿದ್ದೇನೆ. ಅದರಲ್ಲಿ ನನಗೆ ವಿ.ಪಿ.ಸಿ. 59/B/1 ಖರೀದಿಗೆ ಕೊಟ್ಟಿತ್ತು ಎಂದರೆ ನಿಜ. ನಿಪಿ-3 ಠರಾವಿನಲ್ಲಿ 1 ನೇ ಹಿಸ್ಸಾದಾರ ಶಾಮಸುಂದರ ಆದಿ ಇವರಿಗೆ ಪಶ್ಚಿಮ ದಿಕ್ಕಿಗೆ ಎಂದು ಬರೆಯಲಾಗಿದೆ ಎಂದರೆ ನಿಜ. ವಾದಿ ಪ್ರಭು ಅಂದಾನಪ್ಪ ಆದಿ ಇವರು ನ್ಯಾಯಾಲಯಕ್ಕೆ ಹಾಕಿದ ವಾದ ಪತ್ರ ಮತ್ತು ವಾದ ಪತ್ರದ ಸ್ಕೇಚ್ ನ್ನು ಓದಿ ನೋಡಿದ್ದೇನೆ, ಆದರೆ ಅದರಲ್ಲಿ ಬರೆದ ವಿಚಾರಗಳು ಸುಳ್ಳು ಇವೆ ಎಂದುಹೇಳುತ್ತಾರೆ. ಆ ಮನೆ ಅಖಂಡ ಇದ್ದಾಗ ಅದರ ಮುಖ್ಯಬಾಗಿಲು ಪಶ್ಚಿಮಕ್ಕೆ ಇತ್ತು ಎಂದರೆ ಸಾಕ್ಷಿ ಪೂರ್ವಕ್ಕೆ ಇತ್ತು, ಪಶ್ಚಿಮಕ್ಕೆ ಒಂದು ಕಿಡಕಿ ಮಾತ್ರ ಇತ್ತು, ಪಶ್ಚಿಮಕ್ಕೆ ಯಾವತ್ತು ಬಾಗಿಲು ಇಲ್ಲಾ ಎಂದು ಹೇಳುತ್ತಾರೆ. ಸದರಿ ಮನೆ ಅಖಂಡ ಇದ್ದಾಗ ಆ ಮನೆಯ ಪಶ್ಚಿಮಕ್ಕೆ ರಸ್ತೆ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿ ಪತ್ರ ಮತ್ತು ಅದರ ಜೊತೆ ಹಾಜರುಮಾಡಿದ ಹಾತ್ ನಾಕಾಶೆಯನ್ನು ಬರೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ. ನನ್ನ ಪ್ರತಿವಾದಿ ಪತ್ರದಲ್ಲಿ ಹಾಜರುಮಾಡಿದ ಹಾತನಕಾಶೆಯಲ್ಲಿ ಅಖಂಡ ಮನೆಯ ಪಶ್ಚಿಮಕ್ಕೆ ರಸ್ತೆ ಎಂದು ತೋರಿಸಲಾಗಿದೆ ಎಂದರೆ ನಿಜ. ಸಾಕ್ಷಿ ಆ ರಸ್ತೆ ನಮಗೆ ಸಂಬಂಧಿಸಿದ್ದು ಅಲ್ಲ ಎಂದು ಹೇಳುತ್ತಾರೆ. ಸದರಿ ರಸ್ತೆಯಾದ ನಂತರ ಪಶ್ಚಿಮ ದಿಕ್ಕಿಗೆ ಕುದುರಿ ಇವರ ಮನೆ ಬರುತ್ತದೆ ಎಂದರೆ ಸರಿಯಲ್ಲ. ವಿ.ಪಿ.ಸಿ. ನಂಬರ 59 ಬಿ ಅಖಂಡ ಮನೆ ಇದ್ದಾಗ ಪಶ್ಚಿಮಕ್ಕೆ ರಸ್ತೆ ಇತ್ತು, ರಸ್ತೆ ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ಖರೀದಿ ಕಾಗದ ಪತ್ರದಲ್ಲಿ ಚಕ್ಕಬಂದಿಯಲ್ಲಿ ಪಶ್ಚಿಮಕ್ಕೆಃ ಸರಕಾರಿ ರಸ್ತೆ ಎಂದ ಬರೆಯಲಾಗಿದೆ

ಎಂದರೆ ನಿಜ. ನಮ್ಮ ಖರೀದಿ ಕಾಗದ ಪತ್ರದಲ್ಲಿ ಉತ್ತರಕ್ಕೆ ವೀರಪ್ಪ ಅಕ್ಕಿ ಅಂದರೆ ನಮ್ಮ ತಂದೆ ಇವರ ಮನೆ ಎಂದು ಬರೆಸಲಾಗಿದೆ ಎಂದರೆ ನಿಜ. ವಿ.ಪಿ.ಸಿ. ನಂಬರ 59 ಬಿ ಅಖಂಡ ಮನೆ ಇದ್ದಾಗ ಅದರ ಉತ್ತರಕ್ಕೆ ನಮ್ಮ ತಂದೆಯ ಹೆಸರಿನಲ್ಲಿ ಇದ್ದ ಮನೆ ಇತ್ತು ಎಂದರೆ ನಿಜ. ವಿ.ಪಿ.ಸಿ. ನಂಬರ 59 ಬಿ/1 ಮನೆ ದಕ್ಷಿಣಕ್ಕೆ ಪ್ರಭು ಆದಿ ಇವರ ಮನೆ ಎಂದು ಖರೀದಿ ಕಾಗದ ಪತ್ರದಲ್ಲಿ ಬರೆಸಲಾಗಿದೆ ಎಂದರೆ ನಿಜ. ವಾದಿ ಹಾತನಕಾಶೆಯಲ್ಲಿ ತೋರಿಸಿದ ಹಾಗೆ ABCD ಮನೆ ಪ್ರಭು ಆದಿ ಇವರಿಗೆ ಬಂದಿತ್ತು ಎಂದರೆ ಸರಿಯಲ್ಲ. ಶಾಮಸುಂದರ ಆದಿ ಇವರಿಗೆ DEFC ಮನೆ ಬಂದಿತ್ತು ಎಂದರೆ ಸರಿಯಲ್ಲ. ನಮ್ಮ ಖರೀದಿ ಕಾಗದ ಪತ್ರದಲ್ಲಿ ಪ್ರಭು ಆದಿಗೆ ವಿಭಾಗದಲ್ಲಿ ಬಂದ ಆಸ್ತಿಯನ್ನು ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಶಾಮಸುಂದರ ಆದಿಗೆ ಬಂದಿತ್ತ ಆಸ್ತಿಯನ್ನೆ ನಾವು ಖರೀದಿ ಮಾಡಿದ್ದಾಗಿ ಹೇಳುತ್ತಾರೆ. ನಾವು ಖರೀದಿ ಮಾಡುವಾಗ ಸದರಿ ಹಳೆ ಮನೇಗೆ ಕಂಬ ಮತ್ತು ಜಂತ್ಲಿ ಇತ್ತು ಎಂದರೆ ನಿಜ. ನಾವು ಖರೀದಿ ಹಿಡಿಯುವಾಗ ಸದರಿ ಮನೆ ಈಗ ನೋಡುತ್ತಿರುವ ಪೊಟೋದಲ್ಲಿ ಇತ್ತು ಎಂದರೆ ನಿಜ. ಸದರಿ ಪೊಟೋವನ್ನು ನಿಪಿ-8 ಎಂದು ಗುರುತಿಸಲಾಯಿತು. ಸದರಿ ಪೊಟೋವನ್ನು ಸಾಕ್ಷಿಗೆ ತೋರಿಸಿ ಸದರಿ ಪೂಟೋದಲ್ಲಿ ಕಾಣುವ ಸಂಪೂರ್ಣ ಆಸ್ತಿ ವಾದಿಗೆ ಬಂದಿತತು ಎಂದರೆ ಸಾಕ್ಷಿ ಕಂಬದಿಂದ ಇಟ್ಟಂಗಿ ಗೋಡೆಯ ತುದಿಯವರೆಗೆ ಮಾತ್ರ ವಾದಿಗೆ ಬಂದಿತ್ತು ಎಂದು ಹೇಳುತ್ತಾರೆ. ಸದರಿ ಭಾಗವನ್ನು A ಮತ್ತು B ಎಂದು ಗುರುತಿಸಲಾಯಿತು. ವಾದಿ ಬೆಂಗಳೂರಿನಲ್ಲಿ ವಾಸವಾಗಿರುತ್ತಾನೆ ಎಂದರೆ ನಿಜ. ವಾದಿ ದಿನಾಂಕ 30/05/2015 ರಂದು ಪೋಸ್ಟ ಮೂಲಕ ಒಂದು ಪತ್ರವನ್ನು ನಿಪಿ-5 ರ ಪ್ರಕಾರ ನನ್ನ ತಂದೆ ಹಾಕಿದ್ದರು ಎಂದರೆ ಸಾಕ್ಷಿ ಆ ಪತ್ರವನ್ನು ಮುಟ್ಟಿಲ್ಲ ಎಂದು ಹೇಳುತ್ತಾರೆ. ಆ ಪತ್ರದ ಮೂಲಕ ವಾದಿ ನನ್ನ ಒಪ್ಪಿಗೆ ಇರದೇ ಆ ಮನೆಯನ್ನು ಖರೀದಿ ಮಾಡಬಾರದು ಎಂದು ಅದರಲ್ಲಿ ಬರೆಸಿದ್ದರೂ ಎಂದರೆ ಸರಿಯಲ್ಲ. ನಾವು ಖರೀದಿ ಮಾಡಿದ ನಂತರ ಆ ಹಳೇ ಮನೆಯಲ್ಲಿ ಇದ್ದಂತಹ ಜಂತ್ಲಿ ಮತ್ತು ಕಂಬಗಳನ್ನು ಬಿಚ್ಚಿದ್ದೇವು ಎಂದರೆ ಸಾಕ್ಷಿ ನಾವು ಖರೀದಿ ಹಿಡಿದ ಭಾಗದಲ್ಲಿ ಮಾತ್ರ ಬಿಚ್ಚಿದ್ದೇವು ಮತ್ತು 7-8 ಪೂಟ್ ಪ್ರಭು ಆದಿ ಇವರ ಮನೆ ಕಡೆ ಬಿಟ್ಟು ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.